ಓ ಎಸ್ ನಂ.57/2025

ಪಿ.ಡಬ್ಲ್ಯೂ-1 ರೇವಣಸಿದ್ದಪ್ಪ ತಂದೆ ಶಾಮರಾಯ ಪರ್ಯಾಣ

**(ಇಂದು ದಿನಾಂಕಃ 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

<u>ಪಾಟೀ ಸವಾಲುಃ ಶ್ರೀ ಎಂ ಎಂ ಕೆ ವಕೀಲರಿಂದ.</u>

ದಾವಾ ಆಸ್ತಿಗಳು ನಮ್ಮ ಮುತ್ತಜ್ಜನಿಂದ ಬಂದಿರುತ್ತವೆ. ಮೃತ ಚಂದಪ್ಪ ನನ್ನ ಅಣ್ಣನಾಗಿರುತ್ತಾನೆ. ೨ನೇ ಪ್ರತಿವಾದಿ ಶಂಕರರವರು ನನ್ನ ಅಣ್ಣನಾಗಿರುತ್ತಾನೆ. ೩ನೇ ಪ್ರತಿವಾದಿ ಸುರೇಖಾರವರು ನನ್ನ ಅಣ್ಣನ ಹೆಂಡತಿಯಾಗಿರುತ್ತಾರೆ. ದಾವಾ ಜಮೀನು ಸರ್ವೆ ನಂಬರ ೧೭ ಆಗಿದ್ದು, ಅದರಲ್ಲಿ ೩ ಎಕರೆ ಜಮೀನು ಇರುತ್ತದೆ. ದಾವಾ ಜಮೀನುಗಳನು ಮೊದಲು ನಮ್ಮ ಮುತ್ತಜ್ಜನ ಹೆಸರಿನಲ್ಲಿ ಇದ್ದವು, ನಂತರ ನಮ್ಮ ತಂದೆಯಾದ ಶಾಮರಾಯರವರ ಹೆಸರಿನಲ್ಲಿ ಇದ್ದವು. ಶಾಮರಾಯರವರ ನಂತರ ೧ನೇ ಪ್ರತಿವಾದಿಯಾದ ದಾನಮ್ಮ ಗಂಡ ಚಂದಪ್ಪರವರ ಹೆಸರಿನಲ್ಲಿ ದಾವಾ ಜಮೀನು ಆಗಿರುತ್ತವೆ.

೨. ಸರ್ವೆ ನಂಬರ ೧೭/೪ ರ ೧ ಎಕರೆ ಜಮೀನು ೩ನೇ ಪ್ರತಿವಾದಿಯಾದ ಸುರೇಖಾರವರ ಹೆಸರಿನಲ್ಲಿ ಇದೆ. ಸರ್ವೆ ನಂಬರ ೧೭ ರಲ್ಲಿನ ೩ ಎಕರೆ ಜಮೀನಿನಲ್ಲಿ ಸದರಿ ಜಮೀನನ್ನು ೩ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೂ ಕೂಡಾ ದಾವಾ ಆಸ್ತಿಯಲ್ಲಿ ಪಾಲು ಇರುತ್ತದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.